**ಸುರಪುರ ತಾಲ್ಲೂಕಿನ ಹೆಬ್ಬಾಳ ಮತ್ತು ಮಂಗಿಹಾಳ ಗ್ರಾಮಗಳಲ್ಲಿ ನೀರಿನ ನಾಲಾದಿಂದ ತೊಂದರೆಯಾಗಿರುವುದು**

570 (5218) : ಶ್ರೀ ರಾಜಾ ವೆಂಕಟಪ್ಪ ನಾಯಕ್ (ಸುರಪುರ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರವು ಸುರಪುರ ತಾಲ್ಲೂಕಿನ ಹಳ್ಳಿಗಳಾದ ಹೆಬ್ಬಾಳ ಮತ್ತು ಮಂಗಿಹಾಳ್ ಗ್ರಾಮಗಳು ನೀರಿನ ನಾಲಾದಿಂದ ತೊಂದರೆಗೀಡಾಗಿರುವುದನ್ನು ಗಮನಿಸಿದೆಯೇ;

ಆ) ಹಾಗಾದರೆ, ಸರ್ಕಾರವು ಸೇತುವೆಯನ್ನು ಯಾವಾಗ ನಿರ್ಮಿಸುವುದು.

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಹೌದು. ಸುರಪುರ ತಾಲ್ಲೂಕಿನ ಹಳ್ಳಿಗಳಾದ ಹೆಬ್ಬಾಳ ಮತ್ತು ಮಂಗೀಹಾಳ್ ಗ್ರಾಮಗಳ ಜನರ ಹಾಗೂ ವಾಹನ ಸಂಚಾರಕ್ಕೆ ನಾಲಾ ಹರಿಯುವುದರಿಂದ ತೊಂದರೆಯಾಗುತ್ತಿರುವುದನ್ನು ಗಮನಿಸಿದೆ. ಸದರಿ ಗ್ರಾಮಗಳಲ್ಲಿ ಬರುವ ಅಚ್ಚುಕಟ್ಟು ರಸ್ತೆಗಳು ಹಾಗೂ ಸಿ.ಡಿ.ಕೆಲಸಗಳ ಸುಧಾರಣೆ ಅವಶ್ಯವಿದೆ. ಅವುಗಳನ್ನು 2003–04ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅಳವಡಿಸಿ ಕೆಲಸಗಳನ್ನು ಈ ಸಾಲಿನಲ್ಲಿ ಕೈಗೊಳ್ಳಲಾಗುವುದು.

ಆ) ಈ ಸಾಲಿನಲ್ಲಿ ಕೈಗೊಳ್ಳಲಾಗುವುದು.

**ಆಳಂದ ಬಾಣಗಾಪುರ ರಸ್ತೆಯ ಡಾಂಬರೀಕರಣ**

576 (4993) : ಶ್ರೀ ಗುತ್ತೇದಾರ್ ಸುಭಾಷ ರುಕ್ಮಯ್ಯ (ಆಳಂದ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಆಳಂದ. ಗಾಣಗಾಪುರ ರಸ್ತೆಯ ಡಾಂಬರೀಕರಣ ಕಾಮಗಾರಿಯನ್ನು ಸುಮಾರು ವರ್ಷಗಳಿಂದ ಯಾವ ಕಾರಣಕ್ಕಾಗಿ ಕೈಗೆತ್ತಿಕೊಂಡಿಲ್ಲ;

ಆ) ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು;

ಇ) ಪ್ರಸ್ತುತ ಸಾಲಿನಲ್ಲಿ ಈ ಕಾಮಗಾರಿಯನ್ನು ಮುಗಿಸಲಾಗುವುದೇ?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಆಳಂದ – ಗಾಣಗಾಪುರ ರಸ್ತೆಯನ್ನು ಅಮರ್ಜಾ ಯೋಜನೆಯ ಸಂಪರ್ಕ ರಸ್ತೆಯನ್ನಾಗಿ ಅಳವಡಿಸಲು ಲೋಕೋಪಯೋಗಿ ಇಲಾಖೆಯ ಅಧೀನದಿಂದ 1979ರಲ್ಲಿ ನೀರಾವರಿ ಇಲಾಖೆಗೆ ಅಮರ್ಜಾ ಯೋಜನೆಯು ಪೂರ್ಣಗೊಳ್ಳುವವರೆಗೆ ನಿರ್ವಹಣೆ ಹಾಗೂ ಸುಧಾರಣೆ ಮಾಡಲು ಹಸ್ತಾಂತರಿಸಲಾಗಿದ್ದು, ಈ ರಸ್ತೆಗೆ ನಿರ್ವಹಣೆ ಹಾಗೂ ಸುಧಾರಣೆಗಾಗಿ ತಗಲುವ ವೆಚ್ಚವನ್ನು ಯೋಜನೆಯ ಅನುದಾನದಿಂದ ಭರಿಸಲಾಗುತ್ತಿತ್ತು. ಭೂಸನೂರ ಗ್ರಾಮದ ರತ್ತಿರ ಇರುವ ಸಕ್ಕರೆ ಕಾರ್ಖಾನೆಗೆ ಕಚ್ಚಾ ವಸ್ತುಗಳನ್ನು ಸರಬರಾಜು ಮಾಡುವ ಭಾರಿ ವಾಹನಗಳ ಓಡಾಟದಿಂದಾಗಿ ರಸ್ತೆಯು ಹಾಳಾಗಿರುತ್ತದೆ. ಈ ರಸ್ತೆಯು ಸುತ್ತಮುತ್ತಲಿನ ಸಾರ್ವಜನಿಕ ಸಂಪರ್ಕ ರಸ್ತೆಯಾಗಿರುವುದರಿಂದ ರಸ್ತೆಯನ್ನು ದುರಸ್ತಿಗೊಳಿಸುವುದು ಅವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಮುಖ್ಯ ಇಂಜಿನಿಯರ್ ಈಗಾಗಲೇ ಅಂದಾಜು ಪಟ್ಟಿಯನ್ನು ಸಲ್ಲಿಸಿದ್ದು, ಪರಿಶೀಲನೆಯಲ್ಲಿದೆ.

ಅಮರ್ಜಾ ಯೋಜನಾ ಪರಿವೀಕ್ಷಣೆಗಾಗಿ ದಿನಾಂಕ:18/02/2003 ರಂದು ಭೇಟಿ ನೀಡಿದ ಸಮಯದಲ್ಲಿ ಈ ರಸ್ತೆಯ ಸುಧಾರಣೆಗಾಗಿ ಕೂಡಲೇ ಕ್ರಮವನ್ನು ಕೈಗೊಳ್ಳುವಂತೆ ಆದೇಶಿಸಿದ್ದು, 2003–04ನೇ ಸಾಲಿನಲ್ಲಿ ಅಚ್ಚುಕಟ್ಟು ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಿಗಾಗಿ ಒದಗಿಸುವ ಅನುದಾನದಲ್ಲಿ ಸೂಕ್ತ ಅನುದಾನವನ್ನು ಒದಗಿಸಿ ಈ ರಸ್ತೆಯ ಸುಧಾರಣೆ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಆ) ಮೇಲೆ ವಿವರಿಸಿರುವಂತೆ 2003-04ನೇ ಸಾಲಿನಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

**ಲಕ್ಕವಳ್ಳಿ ಮತ್ತು ಭದ್ರಾವತಿ ಸಂಪರ್ಕಕ್ಕಾಗಿ ಗೊಂದಿ ಸೇತುವೆ ನಿರ್ಮಾಣ**

580 (4981) : ಶ್ರೀ ನೀಲಕಂಠಪ್ಪ ಬಿ.ಆರ್ (ತರೀಕೆರೆ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಲಕ್ಕವಳ್ಳಿ ಮತ್ತು ಭದ್ರಾವತಿ ಸಂಪರ್ಕಕ್ಕಾಗಿ ಹಾಗೂ ರೈತರ ಕಬ್ಬಿನ ಸಾಗಾಣಿಕೆಗಾಗಿ ಗೊಂದಿ ಸೇತುವೆ ನಿರ್ಮಾಣಕ್ಕಾಗಿ 1 ಕೋಟಿ ಅಂದಾಜು ವೆಚ್ಚ ಆಗಲಿದ್ದು, ಈ ಕಾಮಗಾರಿ ಯಾವಾಗ ಪ್ರಾರಂಭಿಸಲಾಗುವುದು.

ಆ) ಸದರಿ ಕಾಮಗಾರಿಯನ್ನು ಯಾವ ಅವಧಿಯಲ್ಲಿ ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗುವುದು.

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಈ ಕಾಮಗಾರಿಗೆ ರೂ.199.00 ಲಕ್ಷಗಳಿಗೆ ಅಂದಾಲು ತಯಾರಿಸಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಆಡಳಿತಾತ್ಮಕ ಮಂಜೂರಾತಿ ದೊರೆತ ನಂತರ ಟೆಂಡರ್ ಕರೆದು ಒಂದು ವರ್ಷದ ಅವಧಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

**ಚುಕ್ಕಿ ಗುರುತಿಲ್ಲದ ಪಶ್ನೋತ್ತರಗಳು**

**ಸಸ್ಯ ಸಂರಕ್ಷಣಾ ಕಾರ್ಯಗಳು**

4651 (5435) : ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತೋಟಗಾರಿಕಾ ಬೆಳೆಗಳು, ಹೊಸ ರೋಗಗಳಿಗೆ ತುತ್ತಾಗುತ್ತಿರುವುದನ್ನು ಗಮನಿಸಲಾಗುತ್ತಾ ಇದೆಯೇ;

ಆ) ಹಾಗಿದ್ದಲ್ಲಿ, ಈ ದಿಶೆಯಲ್ಲಿ ಸಸ್ಯ ಸಂರಕ್ಷಣಾ ಕಾರ್ಯಗಳಿಗೆ ಹೆಚ್ಚು ಮಹತ್ವ ನೀಡಲು, ಕೈಗೊಳ್ಳಲಾಗುವ ಕಾರ್ಯಕ್ರಮಗಳೇನು;

ಇ) ತೋಟಗಾರಿಕೆ ಇಲಾಖೆಯಲ್ಲಿ ಸಂಶೋಧನಾ ವಿಭಾಗವನ್ನು, ಈ ದಿಶೆಯಲ್ಲಿ ಪ್ರಾರಂಭ ಮಾಡಲಾಗುವುದೇ?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು):

ಅ) ಗಮನಿಸಲಾಗುತ್ತಿದೆ.

ಆ) • ರಾಜ್ಯಮಟ್ಟದಲ್ಲಿ ಪರಿಣಿತ ತಾಂತ್ರಿಕ ಸಮಿತಿಯನ್ನು ರಚಿಸಲಾಗಿದೆ.

• ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ತಜ್ಞರನ್ನೊಳಗೊಂಡ ರೋಗ ಮತ್ತು ಕೀಟಗಳ ಸರ್ವೇಕ್ಷಣಾ ತಂಡವನ್ನು ರಚಿಸಿದೆ.

• ತಾಂತ್ರಿಕ ಸಲಹೆಗಳನ್ನು ರೈತರಿಗೆ ಪ್ರಚಾರ ಮಾಧ್ಯಮಗಳು, ವಿಚಾರ ಸಂಕಿರಣಗಳು, ಕಾರ್ಯಗಾರಗಳು ಕರಪತ್ರಗಳು ಇತ್ಯಾದಿಗಳ ಮೂಲಕ ಮಾಹಿತಿ ಒದಗಿಸಲಾಗುತ್ತಿದೆ.